ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 37/2017 ಸಿಡಬ್ಲ್ಯೂ : 2 ಪಿ ಡಬ್ಲ್ಯೂ : 1

| | |
|---|---|
| ಹೆಸರು | ಲಕ್ಷ್ಮಮ್ಮ |
| ಗಂಡನ ಹೆಸರು | ರವಿ ಕುಮಾರ್ |
| ವಯಸ್ಸು | 35 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಬ್ರಹ್ಮಪುರ |

ದಿನಾಂಕಃ 12.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ನನ್ನ ಅಣ್ಣ, ಆತ ಅನಾರೋಗ್ಯದಿಂದ ಮರಣ ಹೊಂದಿರುತ್ತಾನೆ. ಚಾಸಾ 3 ನನ್ನ ಪತಿ. ಚಾಸಾ 4 ನನ್ನ ಅತ್ತೆ. ಚಾಸಾ 5 ನನ್ನ ಅಳಿಯ. ಚಾಸಾ 6 ನನ್ನ ಅತ್ತಿಗೆ. ಚಾಸಾ 7 ರಿಂದ 11 ರವರ ಪರಿಯವಿದೆ. ಆರೋಪಿತರ ಪರಿಚಯವಿದೆ. ಸುಮಾರು 7 ವರ್ಷಗಳ ಹಿಂದೆ ಯುಗಾದಿ ಹಬ್ಬದ ದಿನ ನಾನು ಊಟದ ಎಲೆಯನ್ನು ಬಿಸಾಡಲು ಅರಳಿ ಕಟ್ಟೆ ಹತ್ತಿರ ಹೋಗಿದ್ದೆ. ಆಗ ಅಲ್ಲಿ ಚಾಸಾ 1 ನನ್ನ ಅಣ್ಣ ನಾಗೇಂದ್ರ ಮತ್ತು 2 ನೇ ಅರೋಪಿ ನಂಜುಂಡ ಜಗಳವಾಡುತ್ತಿದ್ದರು. ಆಗ ನಾನು ಮನೆಗೆ ಬಂದು ವಿಷಯ ತಿಳಿಸಿ ಅವರುಗಳನ್ನು ಕರೆದುಕೊಂಡು ಹೋಗಿ ಜಗಳ ಬಿಡಿಸಿ ನಮ್ಮ ಅಣ್ಣನನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಆಗ ನಮ್ಮ ಮನೆಯ ಬಳಿ ಆರೋಪಿತರು ಬಂದು 2 ನೇ ಆರೋಪಿಯು ರಿಪೀಸ್ ಪಟ್ಟಿ ಮತ್ತು ದೊಣ್ಣೆಯಲ್ಲಿ ಚಾಸಾ 1 ರವರಿಗೆ ತಲೆಗೆ, ಭುಜಕ್ಕೆ ಹೊಡೆದಿರುತ್ತಾರೆ. ಅವರಿಗೆ ರಕ್ತ ಬಂದಿರುತ್ತದೆ. ನಾವು ಆತತನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿತರು ನನ್ನ ಪತಿ, ನನ್ನ ಅತ್ತೆ, ನನ್ನ ಅಳಿಯ, ನನ್ನ ಅತ್ತಿಗೆಗೆ ಕೈಯಿಂದ ಹಾಗೂ

ಕಾಲಿನಿಂದ ಹೊಡೆದಿರುತ್ತಾರೆ. 3 ಮತ್ತು 4 ನೇ ಆರೋಪಿಯು ನನ್ನ ಪತಿಯ ಕೊರಳಿನ ಪಟ್ಟಿಯನ್ನು ಹಿಡಿದುಕೊಂಡು ಎಳೆದು ಅವರಿಗೆ ಹೊಡೆದಿರುತ್ತಾರೆ. ಆರೋಪಿತರು ನನ್ನ ಅಣ್ಣನಿಗೆ ರೂ.20 ಸಾವಿರ ಕೊಡಬೇಕಾಗಿದ್ದು, ಅದನ್ನು ಕೇಳಲು ಹೋದಾಗ ಆರೋಪಿತರು ನನ್ನ ಅಣ್ಣನಿಗೆ ಹೊಡೆದಿರುತ್ತಾರೆ ಹಾಗೂ ನಮಗೂ ಹೊಡೆದಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ದೊಣ್ಣೆ ಮತ್ತು ರಿಪೀಸ್ ಪಟ್ಟಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೊಣ್ಣೆ ಮತ್ತು ರೀಪೀಸ್ ಪಟ್ಟಿಯನ್ನು ಎಂ ಒ 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ 1, 2 ಮತ್ತು 5 ರವರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಚಾಸಾ 3 ರವರು ಆ ದಿನ ಧರಿಸಿದ್ದ ಹರಿದ ಶರ್ಟನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಶರ್ಟನ್ನು ಎಂ ಒ 3 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು : ಎ ಪಿ ಪಿ ರವರಿಂದಃ

2. ನನ್ನನ್ನು ಶ್ರೀರಂಗಪಟ್ಟಣದ ಬ್ರಹ್ಮಪುರದ ಗ್ರಾಮದ ರವಿಕುಮಾರ್ ಅವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ನನ್ನ ಅಣ್ಣ ನಾಗೇಂದ್ರ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ನನ್ನ ಅಣ್ಣನಿಂದ ರೂ.15 ಸಾವಿರವನ್ನು ಸಾಲವಾಗಿ ಪಡೆದದಿರುತ್ತಾನೆ ಎಂದರೆ ಸರಿ. ಆತ ನನ್ನ ಅಣ್ಣನಿಗೆ ಹಿಂದಿರುಗಿಸಿರುವುದಿಲ್ಲ ಎಂದರೆ ಸರಿ. ಈ ಸಂಬಂಧವಾಗಿ ದುಡ್ಡಿನ ವಿಚಾರವಾಗಿ ಅವರ ನಡುವೆ ಗಲಾಟೆಗಳಾಗುತಿತ್ತು ಎಂದರೆ ಸರಿ. ಗಲಾಟೆಯಾದರೂ ಸಹ 1 ನೇ ಆರೋಪಿಯು ಹಣವನ್ನು ಹಿಂದಿರುಗಿಸಿರಲಿಲ್ಲ ಎಂದರೆ ಸರಿ. ದಿಃ 29.03.2017 ರ ನಮ್ಮ

ಊರಿನ ಹಳ್ಳಿ ಕಟ್ಟೆಯ ಹತ್ತಿರ ಜಗಳವಾಗುತ್ತಿತ್ತು ಎಂದರೆ ಸರಿ. ಜಗಳವಾದಾಗ ನಾನು, ನಿತೀನ್, ಭಾಗ್ಯಮ್ಮ, ಶಿವಮ್ಮ ಹಾಗೂ ನನ್ನ ಪತಿ ಅಲ್ಲಿಗೆ ಹೋದವು ಎಂದರೆ ಸರಿ. ಆಗ ನನ್ನ ಅಣ್ಣ ನಾಗೇಂದ್ರ 1ನೇ ಆರೋಪಿಯ ಬಳಿ ಹಣ ಕೇಳುತ್ತಿದ್ದರು ಎಂದರೆ ಸರಿ. ಆಗ 1ನೇ ಆರೋಪಿಯು ತನ್ನ ಬಳಿ ಹಣ ಇಲ್ಲ ಎಂದು ಹೇಳಿ ಜಗಳ ತೆಗೆದು ರಸ್ತೆಯ ಬದಿಯಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ನನ್ನ ಅಣ್ಣನ ಎಡತಲೆ, ಬಲಭುಜ, ಬೆನ್ನು ಮತ್ತು ಎಡತೊಡೆಯ ಮೇಲೆ ಹೊಡೆದು ನೋವುಂಟು ಮಾಡಿರುತ್ತಾನೆ ಎಂದರೆ ಸರಿ. ನಾಗೇಂದ್ರ ಅವರು ನೋವಿನಿಂದ ಕೂಗಿಕೊಂಡಾಗ ಆರೋಪಿಯ ತಂದೆ ಮತ್ತು ಸುರೇಶ, ರಾಜೇಶ ಮತ್ತು ಶೋಭಾ ಅವರು ಜಗಳವನ್ನು ತೆಗೆದು 1ನೇ ಆರೋಪಿಯು ದೊಣ್ಣೆಯಿಂದ ಚಾಸಾ 5 ರವರಿಗೆ ಹೊಡೆದು, ತಲೆಗೆ ಹೊಡೆದು ರಕ್ತ ಗಾಯ ಮಾಡಿದನು ಎಂದರೆ ಸರಿ. 2ನೇ ಆರೋಪಿಯು ನಿತೀನ್ ಅವರ ಮೇಲೆ ಗುದ್ದಿ ನೋವು ಮಾಡಿರುತ್ತಾನೆ ಎಂದರೆ ಸರಿ. 2 ನೇ ಆರೋಪಿಯು ಅಲ್ಲೇ ಬಿದ್ದಿದ್ದ ರಿಪೀಸ್ ಪಟ್ಟಿ ತೆಗೆದು ಚಾಸಾ6 ರವರ ಮೈ ಕೈ ಮೇಲೆ ಹೊಡೆದು ಗಾಯ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು 2ನೇ ಆರೋಪಿಯ ಕೈಯಲ್ಲಿದ್ದ ದೊಣ್ಣೆ ರಿಪೀಸ್ ಪಟ್ಟಿಯಿಂದ ಕಿತ್ತುಕೊಂಡು ಚಾಸಾ6 ರವರಿಗೆ ಮೈ ಕೈ ಮೇಲೆ ಹೊಡೆದು ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. 3 ರಿಂದ 5ನೇ ಆರೋಪಿತರು ಕೈಗೆ ನನಗೆ ಹೊಡೆದು ನೋವು ಮಾಡಿರುತ್ತಾರೆ ಎಂದರೆ ಸರಿ. ರಾಜೇಶ ಮತ್ತು ಸುರೇಶ ನನ್ನ ಪತಿ ರವಿ ಕುಮಾರ್ ಅವರಿಗೆ ನಿನ್ನ ಭಾವನ ಕುರಿತು ಬಂದಿದ್ದೀಯಾ ಎಂದು ಹೇಳಿ ಆತನ ಶರ್ಟನ್ನು ಹರಿದು ಹಾಕಿ, ಕೈಯಿಂದ ಮೈ ಕೈ ಮೇಲೆ ಗುದ್ದಿ, ಕಾಲುಗಳಿಂದು ಹೊಡೆದು ನೋವು ಉಂಟು ಮಾಡಿದರು ಎಂದರೆ ಸರಿ. ನೋವು ತಳಲಾರದೆ ಕಿರುಚಿಕೊಂಡಾಗ ಗ್ರಾಮಸ್ಥರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತಾರೆ ಎಂದರೆ ಸರಿ. 1ನೇ ಹಾಗೂ 2ನೇ

ಆರೋಪಿತರು ದೊಣ್ಣೆ ಮತ್ತು ರಿಪೀಸ್ ಪಟ್ಟಿಯನ್ನು ಅಲ್ಲೇ ಬಿಸಾಡಿ ಹೋಗಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ : ಶ್ರೀ ಸಿ ಪಿ ಎಂ ವಕೀಲರಿಂದ:</u>

1. ನಾನು ಪೊಲೀಸರಿಗೆ ಯುಗಾದಿ ಹಬ್ಬದ ದಿನ ನಾನು ಊಟದ ಎಲೆಯನ್ನು ಬಿಸಾಡಲು ಹೋದಾಗ ಗಲಾಟೆಯನ್ನು ನೋಡಿರುತ್ತೇನೆ ಹಾಗೂ ಮನೆಗೆ ಹೋಗಿ ವಿಚಾರವನ್ನು ತಿಳಿಸಿರುತ್ತೇನೆ ಎಂದು ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ನಾನು ಹೇಳಿದ ರೀತಿಯೇ ನನ್ನ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿಯೇ ಪೊಲೀಸರಿಗೆ ಹೇಳಿಕೆ ನೀಡಿದ್ದು, ಅದನ್ನು ಹೊರತು ಪಡಿಸಿ ಬೇರೆ ಏನು ಹೇಳಿರುವುದಿಲ್ಲ. ನಮ್ಮ ಮನೆಯಿಂದ ಅರಳಿ ಕಟ್ಟೆ ಸ್ವಲ್ಪ ದೂರ ಇರುತ್ತದೆ. ನನಗೆ ನಿರ್ದಿಷ್ಟ ಅಂತರ ಹೇಳಲು ಗೊತ್ತಾಗುವುದಿಲ್ಲ. ಆರೋಪಿತರು ಚಾಸಾ 1 ರವರೊಂದಿಗೆ ಜಗಳವಾಡಿ ಅವರಿಗೆ ಹಲ್ಲೆ ಮಾಡಿರುವುದಿಲ್ಲ ಹಾಗೂ ನಮ್ಮಗಳ ಜೊತೆಯೂ ಸಹ ಜಗಳ ಮಾಡಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೆ ನನ್ನ ಅಣ್ಣ ನಾಗೇಂದ್ರ ರೂ.7 ಸಾವಿರ ಸಾಲವನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು ಕೇಳಲು ನನ್ನ ಅಣ್ಣ ನಾಗೇಂದ್ರ ಮತ್ತು ಆತನ ಮಗ ನಿತೀನ್ 2 ನೇ ಆರೋಪಿಯ ಬಳಿ ಹೋಗಿ ಹಣವನ್ನು ಕೇಳಿದಾಗ ಆತ ಕಾಲಾವಕಾಶ ಕೇಳಿದಾಗ ಆತನೊಂದಿಗೆ ಜಗಳವಾಡಿ ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ನನ್ನ ಅಣ್ಣ ಮತ್ತು ಆತನ ಮಗ ವಿರುದ್ದ ದೂರನ್ನುದಾಖಲು ಮಾಡಿದ್ದರು ಎಂದರೆ ಸರಿ. 2 ನೇ ಆರೋಪಿಗೆ ಹೊಡೆದ ಕಾರಣ ಆತನಿಗೆ ಪೆಟ್ಟಾಗಿ ಆತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಗಲಾಟೆಯಾದಾಗ ನಾನಾಗಲೀ ಅಥವಾ ನಮ್ಮ ಕುಟುಂಬದವರಾಗಲೀ ಅಲ್ಲಿ

ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಪಕ್ಕದ ಮನೆಯಲ್ಲಿದ್ದು ಅವರು ಹಣವನ್ನು ಹಿಂದಿರುಗಿಸಿಲ್ಲ ಎಂಬ ದ್ವೇಷವನ್ನು ಇಟ್ಟುಕೊಂಡು ನನ್ನ ಅಣ್ಣ ನಾಗೇಂದ್ರ ಹಾಗೂ ಆತನ ಮಗ ನಿತೀನ್ 2 ನೇ ಆರೋಪಿಯ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಎಂದಿಗೂ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರಿರುವ ಎಂ ಒ 1 ಅನ್ನು ತೋರಿಸಿ ಅದು ದೊಣ್ಣೆಯಾ ಅಥವಾ ಕಡ್ಡಿಯಾ ಎಂದರೆ ಸಾಕ್ಷಿ ಅದು ದೊಣ್ಣೆ ಎಂದು ಹೇಳುತ್ತಾರೆ. ಎಂ ಒ 1 ಒಲೆಗೆ ಉರಿಸುವ ಕಡ್ಡಿಯಾಗಿದ್ದು, ಅದು ದೊಣ್ಣೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಒ 2 ರಿಪೀಸ್ ಪಟ್ಟಿಯಲ್ಲ ಅದು ಕಿಟಕಿಗೆ ಉಪಯೋಗಿಸುವ ಮರದ ಪಟ್ಟಿ ಎಂದರೆ ಸರಿಯಲ್ಲ. ಮನೆಯಲ್ಲೇ ಇರುವ ಕಡ್ಡಿ, ಮರದ ಪಟ್ಟಿ ಹಾಗೂ ಹರಿದ ಶರ್ಟನ್ನು ಕೇಸಿಗೆ ಪೊಲೀಸರೊಂದಿಗೆ ಶಾಮೀಲಾಗಿ ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ 2 ನೇ ಆರೋಪಿ ಕೇವಲ ರೂ.7 ಸಾವಿರ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ, ಬರೆಸಿರುವುದು ರೂ.20 ಸಾವಿರ ಕೊಡುವುದು ಎಷ್ಟು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಮ್ಮಗಳಿಗೆ ಹೊಡೆದು ರಕ್ತಗಾಯಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊಡೆದು, ತುಳಿದು, ಎಂ ಒ 1 ಮತ್ತು 2 ಅನ್ನು ಉಪಯೋಗಿಸಿ ರಕ್ತ ಗಾಯಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. 2 ನೇ ಆರೋಪಿಯು ನೀಡಿದ ದೂರು ಸಿಸಿ ನಂ.325/2017 ಎಂದು ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಅವರ ಮುಂದೆ ನೋಂದಣಿಯಾಗಿತ್ತು ಎಂದರೆ ಸರಿಯಲ್ಲ. ಸದರಿ ಕೇಸು ನನ್ನ ಅಣ್ಣ ತೀರಿಕೊಂಡ ಕಾರಣ ಮುಕ್ತಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ಮೇಲೆ ಇರುವ ದ್ವೇಷಕ್ಕಾಗಿ ಅವರು ಯಾವುದೇ ಹಲ್ಲೆ

ಮಾಡಿ ರಕ್ತ ಗಾಯಪಡಿಸದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ರಕ್ತಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.

-